MYSORE LEGISLATIVE ASSEMBLY

Saturday, 5th February 1966.

The House met in the Assembly Chamber, Vidhana Soudha, Bangalore at Thirty Minutes past Eight of the Clock.

MR. SPEAKER (SRI B. VAIKUNTA BALIGA, B.A., B.L.) in the Chair.]

STARRED QUESTIONS

(to which oral answers were given)

Upgrading of Combined Dispensary

*Q.—36. SRI H. D. DEVE GOWDA (Holenarasipur).—

Will the Government be pleased to state :—

(*a*) whether they have received representations requesting to upgrade the combined dispensary at Holenarasipur and to provide medical facilities to the public therein ;

(*b*) what is the bed strength of the said dispensary at present ;

(*c*) whether it has come to their notice that due to the inadequate facilities to the patients in the above dispensary much inconvenience is being caused to the people ;

(*d*) whether they would contemplate to increase the present bed strength to 50 ;

(*e*) whether they would upgrade the said hospital and provide sufficient medicines and suitably increase the staff and other necessary facilities ?

*A.—SRI K. NAGAPPA ALVA (Minister for Health).—

(*a*) Yes.

(*b*) 24.

(*c*) No.

(*d*) Yes.

(*e*) The suggestion will be considered.

ಶ್ರೀ ಎಚ್. ಡಿ. ದೇವೇಗೌಡ.—ನನ್ನ ಪ್ರಶ್ನೆಗೆ (ಈ) ಗೆ ಉತ್ತರವಾಗಿ ಹೌದು ಎಂದು ಹೇಳಿದ್ದಾರೆ. ಇದಕೆ ಆಗತಕ್ಕ ವೆಚ್ಚವೆಷ್ಟು, ಅದನ್ನು ಈ ವರ್ಷದ ಬಡ್ಜೆಟ್ಟಿನಲ್ಲಿ ಆಳವಡಿಸುವುದಕ್ಕೆ ಏರ್ಪಾಡು ಮಾಡುತ್ತಾರೆಯೇ ?

†ಶ್ರೀ ಕೆ. ನಾಗಪ್ಪ ಆಳ್ವ.—ವೆಚ್ಚ ಒಟ್ಟು ಸಾಧಾರಣವಾಗಿ 160 ಸಾವಿರ ರೂಪಾಯಿಗಳಾಗುತ್ತದೆ. ಲೋಕಲ್ ಬಾಡಿಗಳೆಂದರೆ ಮುನಿಸಿಪಾಲಿಟಿ ಹಾಗೂ ತಾಲ್ಲೂಕು ಬೋರ್ಡುಗಳಿಗೆ ಇದಕ್ಕಾಗಿ ಕಾಂಟ್ರಿಬ್ಯೂಷನ್ ಕೊಡುವ ವಿಷಯದಲ್ಲಿ ತಿಳಿಸಿದ್ದೇವೆ. ಅದು ಬಂದಮೇಲೆ ಎಲ್ಲಾ ರೀತಿಯಲ್ಲೂ ಇವಕ್ಕೆ ಅವರ ಸಹಕಾರ ಸಿಕ್ಕುವುದು ಇದ್ದರೆ ಬರುವ ಬಜೆಟ್ಟಿನಲ್ಲಿ ಅವನ್ನೂಸಹ ಕೂಡಿಸುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ಸರ್ಕಾರವವರು ಈಗಾಗಲೇ ಯೋಚನೆ ಮಾಡಿರುವಹಾಗೆ ನನ್ನ ಕ್ಷೇತ್ರದಲ್ಲಿರತಕ್ಕ ಕಂಪೌಂಡ್ ಡಿಸ್‌ಪೆನ್ಸರಿಯನ್ನು ಆಸ್ಪತ್ರೆಗಳಾಗಿ ಮಾಡುವುದರಲ್ಲಿ ಅಲ್ಲಿನ ಸ್ಥಳೀಯ ಸಂಸ್ಥೆಗಳಾಗಿರತಕ್ಕ ತಾಲ್ಲೂಕು ಬೋರ್ಡುಗಳು ಹಾಗೂ ಮುನಿಸಿಪಾಲಿಟಿಗಳು ತಮ್ಮ ಭಾಗವನ್ನು ರೆಕರಿಂಗ್ ಎಕ್ಸ್‌ಪೆಂಡಿಚರಿಗಾಗಿ ಕೊಡುವ ಬಗ್ಗೆ ಒಪ್ಪಿಗೆಕೊಟ್ಟು ಅವರ ಸಮ್ಮತಿಯನ್ನು ಸರ್ಕಾರಕ್ಕೆ ಕಳುಹಿಸಿರುವುದು ಸರ್ಕಾರವ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಮಾನ್ಯ ಸದಸ್ಯರು ಈಗ ಆ ವಿಷಯವನ್ನು ತಿಳಿಸಿದ್ದಾರೆ. ಆದರೆ ಅದಕ್ಕೆ ಸಂಬಂಧಪಟ್ಟ ಕಾಗದಗಳು ಇಷ್ಟರವರೆಗೆ ನನ್ನ ಕೈಗೆ ಬಂದಿಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಕೆಲವು ಸ್ಥಳೀಯ ಸಂಸ್ಥೆಗಳಲ್ಲಿ ಹಣ ಇರುವುದಿಲ್ಲ. ಅಂತಹ ಕಡೆ ಜನಸಾಮಾನ್ಯರ ಆರ್ಥಿಕವೃಷ್ಟಿಯಿಂದ ಔಷಧಿಗಳನ್ನು ಒದಗಿಸುವುದು ಸರ್ಕಾರವ ಪ್ರಥಮ ಕರ್ತವ್ಯವಲ್ಲವೇ ?

ಶ್ರೀ ಕೆ. ನಾಗಪ್ಪ ಆಳ್ವ.—ಎಲ್ಲೆಲ್ಲಿ ಆಗತ್ಯ ಇದೆಯೋ ಅಲ್ಲಲ್ಲಿ ಸಾಕಷ್ಟುಔಷಧಿಗಳನ್ನುಕೊಟ್ಟು ಅನುಕೂಲಗಳನ್ನು ಕಲ್ಪಿಸುವುದು ನಿಜ.

ಶ್ರೀ ಆರ್. ಎಸ್. ಲಕ್ಷ್ಮೀಪತಿ.—ಪ್ರತಿಯೊಂದು ತಾಲ್ಲೂಕಿನಲ್ಲಿರತಕ್ಕ ಆಸ್ಪತ್ರೆಯಲ್ಲಿ 50 ಬೆಡ್‌ಗಳು ಇರುವ ಹಾಗೆ ಏರ್ಪಾಡು ಮಾಡುವುದಕ್ಕೆ ಸರ್ಕಾರ ಯೋಚನೆ ಮಾಡುತ್ತದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಹಾಗೇನೂ ಇಲ್ಲ. ಸರ್ಕಾರವ ಧೋರಣೆ ಏನಿದೆಯೆಂದರೆ ಎಲ್ಲಿ ಆಗತ ಇದೆಯೋ ಅಂತಹ ಕಡೆಗಳಲ್ಲಿ ತಾಲ್ಲೂಕು ಹೆಡ್‌ಕ್ವಾರ್ಟರಿನ ಆಸ್ಪತ್ರೆಗಳನ್ನು ದೊಡ್ಡದುಮಾಡಿ ಔಷಧಿಗಳನ್ನು ಕೊಡಲಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಔಷಧಿ ಸೌಲಭ್ಯ ಆಲ್ಲಿ ಸಾಕಷ್ಟು ಇಲ್ಲ. ಜನಗಳಿಗೆ ಇದರಿಂದ ತೊಂದರೆಯಾಗುತ್ತಿರುವ ಬಗ್ಗೆ ಮನವಿಗಳೇನೂ ಬಂದಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದರು. ಅಂದರೆ ಈಗಿರತಕ್ಕ ಔಷಧಾಲಯದಲ್ಲಿ ಇಪತ್ತು ಗಂಡಸರ ಮತ್ತು ಹೆಂಗಸರ ಶಾಖೆಯಲ್ಲಿ ಬರತಕ್ಕ ಔಟ್-ಪೇಷೆಂಟ್ಸ್ ಸಂಖ್ಯೆ ಎಷ್ಟು, ಔಷಧಿಗಳಿಗಾಗಿ ಒದಗಿಸಿರುವ ಹಣವೆಷ್ಟು, ಇಲ್ಲಿ ಸಾಕಾಗುವಷ್ಟು ಪ್ರಮಾಣದಲ್ಲಿ ಔಷಧಿ ಇಲ್ಲದೇ ಇರುವ ಸನ್ನಿವೇಶಗಳಲ್ಲಿ ಹೊರಗಡೆಯಿಂದ ಔಷಧಿಗಳನ್ನು ತಂದು ಇಲ್ಲಿ ಒದಗಿಸುತ್ತಿರುವುದು ಸರ್ಕಾರವ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಮಾನ್ಯ ಸದಸ್ಯರು ತಮ್ಮ ಪ್ರಶ್ನೆಯಲ್ಲಿ ಜನರಿಗೆ ಬಹಳ ಅನಾನುಕೂಲತೆ ಇದೆಯೆಂದು ಹಾಕಿದ್ದಾರೆ. ಆ ಆಸ್ಪತ್ರೆಯಲ್ಲಿ ಔಟ್-ಪೇಷೆಂಟ್ಸ್ ನಿಜವಾಗಿ ಹೆಚ್ಚಾಗುತ್ತಿದೆ. ಅದಕ್ಕಾಗಿ ಅನುಕೂಲತೆಗಳನ್ನು ಒದಗಿಸುವ ಏರ್ಪಾಡನ್ನು ಮಾಡುತ್ತಿದ್ದೇವೆ.

MR. SPEAKER.—As the Hon'ble Minister for Revenue has to attend the Legislative Council also, we will now take up Questions pertaining to him.

---

†Indicates that the remarks or speeches have not been revised by the member concerned.